




ಅಂತರಗಂಗೆ, ಕೋಲಾರ

## ವಿಸ್ಮಯ ತಾಣವಿದು ಅಂತರಗಂಗೆ

ಕೋಲಾರಕ್ಕೆ ಚಿನ್ನದೂರು ಅಂತಲೇ ಖ್ಯಾತಿ. ಕೋಲಾರದಲ್ಲಿ ಬೃಹತ್ ಬಂಡೆಗಳಿಂದ ಆವರಿಸಿರುವ ಬೆಟ್ಟಗುಡ್ಡಗಳಿಗೆ ಏನೂ ಕೊರತೆ ಇಲ್ಲ. ಎತ್ತ ನೋಡಿದರೂ ಮುಗಿಲೆತ್ತರದ ಗಗನಚುಂಬಿಗಳೇ. ಕೋಲಾರ ತನ್ನ ಮಗ್ಗುಲಲ್ಲೇ ವಿಸ್ಮಯ ತಾಣವೊಂದನ್ನು ಇರಿಸಿಕೊಂಡಿದೆ. ಅದಕ್ಕೆ ದಕ್ಷಿಣಕಾಶಿ ಅಂತಲೂ ಹೆಸರಿದೆ. ಅದುವೇ ಪುಣ್ಯಕ್ಷೇತ್ರ ಅಂತರಗಂಗೆ. ಕೋಲಾರದ ಬಸ್‌ನಿಲ್ದಾಣದಿಂದ ಎರಡೂ ಮೂರು ಕಿಲೋಮೀಟರ್ ದೂರದಲ್ಲಿರುವ ಬೆಟ್ಟದಲ್ಲಿ ಈ ಕ್ಷೇತ್ರವಿದ್ದು, ಇಲ್ಲಿ ಕಾಶೀ ವಿಶ್ವನಾಥ ನೆಲೆಸಿದ್ದಾನೆ. ಶತಶೃಂಗ ಬೆಟ್ಟದಲ್ಲಿರುವ ದೇಗುಲದ ಅಂಗಳದಲ್ಲಿ ಸುಂದರವಾದ ಕಲ್ಯಾಣಿಯೂ ಇದೆ. ಇಲ್ಲಿಯ ವಿಸ್ಮಯ ಎಂದರೆ ಕಲ್ಯಾಣಿ ಅಂಗಳದಲ್ಲಿ ನಂದಿಯ (ಬಸವ) ಮೂರ್ತಿಯಿದ್ದು, ನಂದಿಯ ಬಾಯಿಯಲ್ಲಿ ವರ್ಷವಿಡೀ ನೀರು ಹರಿಯುತ್ತಿರುತ್ತದೆ. ಕೋಲಾರದ ಬಹುತೇಕ ಮಂದಿ ಇದೇ ನೀರನ್ನು ಕುಡಿಯಲೂ ಬಳಸುತ್ತಾರೆ. ವಿಶೇಷ ಕಾರ್ಯಕ್ರಮಗಳಿಗೆ ಈ ನೀರನ್ನೇ ಬಳಸವುದು ವಾಡಿಕೆ. ಮಳೆಗಾಲದ ಸಮಯದಲ್ಲಂತೂ ಈ ಶತಶೃಂಗ ಬೆಟ್ಟದಿಂದ ಜಲಪಾತ ಹರಿಯುತ್ತದೆ. ಜಲಪಾತದ ಸೊಗಡನ್ನೇ ಕಾಣದ ಈ ಭಾಗದ ಜನರು ಜಲಪಾತ ಹರಿಯುವ ಸಮಯದಲ್ಲಿ ಕಿಕ್ಕಿರಿದು ಸೇರುತ್ತಾರೆ. ಈ ಕ್ಷೇತ್ರದಲ್ಲಿ ಮೂಲ ಸೌಕರ್ಯಗಳ ಕೊರತೆ ಮಾತ್ರ ಎದ್ದು ಕಾಣಿಸುತ್ತದೆ.

–ಅಪ್ಪು, ಕೋಲಾರ

## ಲವ ಕುಶರ ಯುದ್ಧ

ಬಾಗಲಕೋಟೆಯ ಆಲಮಟ್ಟಿಯಲ್ಲಿ ಕೃಷ್ಣಾನದಿಗೆ ಕಟ್ಟಲಾದ ಅಣೆಕಟ್ಟೆಯ ವಿಭಾಗದಲ್ಲಿ ಅನೇಕ ತೋಟಗಳಿವೆ. ಪ್ರತಿಯೊಂದು ನೋಡಲೇ ಬೇಕಾದದದ್ದು ಅದರಲ್ಲಿ ಲವ ಕುಶ ಗಾರ್ಡನ್‌ನಲ್ಲಿ ಲವಕುಶರ ಯುದ್ದದ ದೃಶ್ಯ ಶಿಲ್ಪಗಳನ್ನು. ಅವುಗಳನ್ನು ದೂರದಿಂದ ನೋಡುವುದಕ್ಕಿಂತ ಹತ್ತಿರದಿಂದ ನೋಡಬೇಕು. ಲವ ಕುಶರೊಡನೆ ಕಪಿಸೈನ್ಯ ಹೋರಾಡುವ ಕಲಾಕೃತಿಯಂತೂ ಯುದ್ಧದ ಪೂರ್ಣ ಚಿತ್ರವನ್ನು ಕಣ್ಣ ಮುಂದೆ ಕಟ್ಟಿಕೊಡುತ್ತದೆ. ಹನುಮಂತನನ್ನು ಕಟ್ಟಿಹಾಕಿದ್ದು, ನೀಲ ಅಂಗದರಂತಹ ಶೂರರು ಬೇರೆ ಬೇರೆ ಆಯುಧಗಳೊಡನೆ ಹೋರಾಡುವ ದೃಶ್ಯ ಬಹಳ ಸುಂದರವಾಗಿದೆ. ಮುಖ್ಯವಾಗಿ ಯಾವುದೇ ಶಿಲ್ಪವೂ ಮುಕ್ಕಾಗದೇ ತನ್ನ ಮೂಲ ಸ್ವರೂಪದಲ್ಲಿರುವುದು. ಕಪಿಸೈನ್ಯದ ಪ್ರತಿ ಕಪಿಯೂ ವಿಶಿಷ್ಟವಾದ ಬಣ್ಣ ಕಿರೀಟ ವೇಷಗಳಿಂದ ಕಂಗೊಳಿಸುತ್ತದೆ. ಪುರಾಣದ ಎಲ್ಲ ಯುದ್ದದ ವಿವರಗಳನ್ನು ಮನಮೋಹಕವಾಗಿ ರೂಪಿಸಿದ್ದಾರೆ. ಆಲಮಟ್ಟಿಯ ಸುಂದರ ಪ್ರೇಕ್ಷಣೀಯ ಸ್ಥಳವಿದು ನಾನು ಇತ್ತೀಚೆಗೆ ಈ ತೋಟಕ್ಕೆ ಹೋಗಿದ್ದೆ.

–ಸ್ಮಿತಾ ಮೈಸೂರ, ಹುಬ್ಬಳ್ಳಿ



## ‘ಸೀ ಸಂಡೂರ್ ಇನ್ ಸೆಪ್ಟೆಂಬರ್’



ಬಳ್ಳಾರಿಯ ಸಂಡೂರು ಪಟ್ಟಣಕ್ಕೆ 1934ರಲ್ಲಿ ಮಹಾತ್ಮ ಗಾಂಧೀಜಿ ಅವರು ಭೇಟಿ ನೀಡಿದ್ದರು. ಸಂಡೂರಿನ ಸುತ್ತಲೂ ಇರುವ ಬೆಟ್ಟಗಳ ಹಸಿರು ಹೊದಿಕೆಗೆ ಮನಸೋತು ಸಂಡೂರು ಒಂದು ‘ಓಯಸಿಸ್’ ಇದ್ದಂತೆ, ‘ಸೀ ಸಂಡೂರ್ ಇನ್ ಸೆಪ್ಟೆಂಬರ್’ ಎಂದು ಹೇಳಿದ್ದರು. ‘ದಕ್ಷಿಣ ಭಾರತದ ಒಂದು ಪುಟ್ಟ ಸಂಸ್ಥಾನ ಹರಿಜನರಿಗೆ ದೇವಸ್ಥಾನಗಳಲ್ಲಿ ಮುಕ್ತ ಪ್ರವೇಶ ನೀಡಿತು. ಆಕಾಶವೇನೂ ಕಳಚಿ ಬೀಳಲಿಲ್ಲ’ ಎಂದು ಪುಸ್ತಕದಲ್ಲಿ ತಮ್ಮ ಅಭಿಪ್ರಾಯವನ್ನೂ ಸಹ ನಮೂದಿಸಿದ್ದರು.

ಗಾಂಧೀಜಿ ಸಂಡೂರಿಗೆ ಭೇಟಿ ನೀಡಿದ ನೆನಪಿಗಾಗಿ, ಗಾಂಧೀಜಿಯ 125ನೇ ಜಯಂತಿ ಸಂದರ್ಭದಲ್ಲಿ ಅಲ್ಲಿನ ‘ಆದರ್ಶ ಕಲ್ಯಾಣ ಮಂಟಪ’ದ ಆವರಣದಲ್ಲಿ 11.10.1995 ರಲ್ಲಿ ಗಾಂಧೀಜಿಯ ಪ್ರತಿಮೆಯನ್ನು ಎಂ.ವೈ. ಘೋರ್ಪಡೆಯವರ ಉಪಸ್ಥಿತಿಯಲ್ಲಿ ರಾಜ್ಯಪಾಲ ಖುರ್ಷಿದ್ ಆಲಂ ಖಾನ್ ಅನಾವರಣಗೊಳಿಸಿದರು. ಇದೇ ಸಂದರ್ಭದಲ್ಲಿ ವೈ.ಆರ್ ಘೋರ್ಪಡೆಯವರು ‘ಬಕುಳ ವೃಕ್ಷ’ವನ್ನು ನೆಟ್ಟರು. ಅಂದು ನೆಟ್ಟ ‘ಬಕುಳ ವೃಕ್ಷ’ ಇಂದು ಗಾಂಧಿ ಪ್ರತಿಮೆಯ ಎತ್ತರಕ್ಕೆ ಬೆಳೆದುನಿಂತಿದೆ. ಇದೀಗ ಈ ತಾಣವು ಪ್ರವಾಸಿಗರ ಆಕರ್ಷಣೆಯ ಕೇಂದ್ರ ಬಿಂದುವಾಗಿದ್ದು, ಸಂಡೂರಿಗೆ ಬರುವ ಪ್ರವಾಸಿಗರು ತಪ್ಪದೇ ಇಲ್ಲಿಗೆ ಬಂದು ಪ್ರತಿಮೆಗೆ ನಮನ ಸಲ್ಲಿಸುತ್ತಾರೆ.

–ಕೆ. ಶ್ರೀಧರ, ಚಿಂತಾಮಣಿ